**JANUARY 12,2025**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವವರು: ವಿವೇಕಾದಿತ್ಯ ಕನಿಯಾಲ**

<><><>

**ಕರಾವಳಿಯ ಜನಪದ ಸಂಸ್ಕೃತಿಯ ಪ್ರತೀಕವಾಗಿರುವ ಕಂಬಳ ಕ್ರೀಡೆಯು, ಸರ್ವ ಜಾತಿ ಧರ್ಮದ ಜನಸಮುದಾಯವನ್ನು ಬೆಸೆಯುವಂತೆ ಮಾಡುತ್ತಿದೆ. ಕಂಬಳ ಕ್ರೀಡೆ ಹಾಗೂ ಕಲೆಗೆ ಜಾತಿ–ಧರ್ಮದ ಬೇಲಿ ಇಲ್ಲ. ಇದು ಸರ್ವರ ಸಂಭ್ರಮವಾಗಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು. ಮಂಗಳೂರು ಸಮೀಪದ ಉಳ್ಳಾಲ ನರಿಂಗಾನದಲ್ಲಿ ಮೂರನೇ ವರ್ಷದ ಲವ–ಕುಶ ಜೋಡುಕರೆ ಕಂಬಳೋತ್ಸವವನ್ನು ಅವರು ಉದ್ಘಾಟಿಸಿ ಮಾತನಾಡಿದರು. ಈ ಬಗ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ಹಂಚಿಕೊಂಡಿರುವ ಅವರು ಸುಪ್ರೀಂಕೋರ್ಟ್ ನಿ ೀಧಿಸಿದ್ದ ಕಂಬಳ ಕ್ರೀಡೆಗೆ ಮರು ಚಾಲನೆ ಸಿಗುವಂತೆ ಮಾಡಿದ್ದು ತಮ್ಮ ಸರ್ಕಾರವಾಗಿದೆ. ಒಟ್ಟು 24 ಕಂಬಳಗಳನ್ನು ನಡೆಸಲು ಪ್ರತೀ ಕಂಬಳಕ್ಕೆ ತಲಾ 5 ಲಕ್ಷ ರೂಪಾಯಿ ನೆರವನ್ನು ಸರ್ಕಾರ ನೀಡಿದೆ ಎಂದರು.**

<><><>

**ಉತ್ತರಕನ್ನಡ ಜಿಲ್ಲೆ ಜೊಯಿಡಾದಲ್ಲಿ, ಕಾಳಿ ರೈತ ಉತ್ಪಾದಕರ ಸಂಘ ಆಯೋಜಿಸಿದ್ದ, ವನವಾಸಿ ರೈತರ 11ನೇ ಗೆಡ್ಡೆ, ಗೆಣಸು ಹಾಗೂ ಸೊಪ್ಪುಗಳ ಪ್ರದರ್ಶನ ಮತ್ತು ಮಾರಾಟ ಮೇಳ, ಅಂದಾಜು 8 ಲಕ್ಷ ರೂಪಾಯಿಗಳ ವಹಿವಾಟು ದಾಖಲಿಸಿದೆ ಎಂದು, ಮೇಳದ ಸಂಯೋಜಕ, ಡೇರಿಯಾದ ಡಾಕ್ಟರ್ ಜಯಾನಂದ ಡೇರೇಕರ್, ಪ್ರದೇಶ ಸಮಾಚಾರಕ್ಕಾಗಿ, ಮಾಹಿತಿ ನೀಡಿದ್ದಾರೆ.**

<><><>

**ಡಾ. ಜಯಾನಂದ ಡೇರೇಕರ್ ಧ್ವನಿ 32 ಸೆಕೆಂದುಗಳು**

<><><>

**ಚಿಕ್ಕಮಗಳೂರು ಜಿಲ್ಲೆ, ಭದ್ರಾ ಅಭಯಾರಣ್ಯದ ಅಂಚಿನಲ್ಲಿರುವ, ಸಿರವಾಸೆ ಗ್ರಾಮದ ವಿವೇಕಾನಂದ ಪ್ರಾಥಮಿಕ ಮತ್ತು ಪ್ರೌಢ ಶಾಲೆಯ, ಸುವರ್ಣ ಮಹೋತ್ಸವ ಸಮಾರಂಭವನ್ನು, ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ ಹೆಗಡೆ ಉದ್ಘಾಟಿಸಿದರು. ಸುವರ್ಣ ಮಹೋತ್ಸವ ಸಮಿತಿ ಸಂಚಾಲಕ ಶಿವಶಂಕರ ಮಾಹಿತಿ ನೀಡಿ, ಭದ್ರಾ ಅಭಯಾರಣ್ಯದ ಸೆರಗಿನ ಗ್ರಾಮೀಣ ಶಾಲೆ, 50 ವರ್ಷಗಳನ್ನು ಪೂರೈಸಿದೆ. ಎಂಟು ಸಾವಿರ ಮಕ್ಕಳು ಈ ವರೆಗೆ ಈ ಶಾಲೆಯಲ್ಲಿ ಶಿಕ್ಷಣ ಪಡೆದಿದ್ದಾರೆ. ಇಂದೂ ಕೂಡ ವಿಶೇಷ ಕಾರ್ಯಕ್ರಮಗಳು ನಡೆಯಲಿವೆ ಎಂದರು.**

<><><>

ಬೆಂಗಳೂರಿನ ಬಿ.ಎಂಶ್ರೀ ಪ್ರತಿಷ್ಠಾನ ನೀಡುವ 2025 ನೇ ಸಾಲಿನ, ಶ್ರೀ ಸಾಹಿತ್ಯ ಪ್ರಶಸ್ತಿಗೆ, ಲೇಖಕಿ ವೀಣಾ ಶಾಂತೇಶ್ವರ ಆಯ್ಕೆಯಾಗಿದ್ದಾರೆ. ಕಮಲಿನಿ ಶಾ. ಬಾಲುರಾವ್ ಅವರು, ಪ್ರತಿಷ್ಠಾನದಲ್ಲಿ ದತ್ತಿ ಪ್ರಶಸ್ತಿಯನ್ನು ಸ್ಥಾಪಿಸಿದ್ದಾರೆ. ದತ್ತಿ ಪ್ರಶಸ್ತಿಯು 1 ಲಕ್ಷ ರೂಪಾಯಿ ನಗದು ಒಳಗೊಂಡಿದೆ. ಹಂ.ಪ ನಾಗರಾಜಯ್ಯ, ರೂಪ ಹಾಸನ ಹಾಗೂ ಸೋಮಣ್ಣ ಅವರನ್ನು ಒಳಗೊಂಡ ಸಮಿತಿ ಈ ಆಯ್ಕೆ ಮಾಡಿದೆ.

<><><>

ಕರ್ನಾಟಕ ಲೋಕಸೇವಾ ಆಯೋಗ ನಡೆಸಿದ ಸ್ಪರ್ಧಾತ್ಮಕ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳಲ್ಲಿ ಲೋಪದೋಷ ಕಂಡು ಬಂದ ಕಾರಣ, ಮತ್ತೆ ಪರೀಕ್ಷೆ ನಡೆಸಲು ಆಯೋಗಕ್ಕೆ ಆದೇಶ ನೀಡಬೇಕು ಎಂದು ಹಿರಿಯ ಸಾಹಿತಿ ಗೊ.ರು ಚನ್ನಬಸಪ್ಪ ಸರ್ಕಾರವನ್ನು ಒತ್ತಾಯಿಸಿದ್ದಾರೆ. ಈ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆದಿದ್ದಾರೆ.

<><><>

ಯಾದಗಿರಿ ಜಿಲ್ಲಾ ಕ್ರೀಡಾಂಗಣದಲ್ಲಿ, 17 ರಿಂದ 21ರ ವರೆಗೆ, ಕಲ್ಯಾಣ ಕರ್ನಾಟಕ ವಿಭಾಗದ, ದ್ವಿತೀಯ ಸ್ಕೌಟ್ಸ್ ಮತ್ತು ಗೈಡ್ಸ್ ಜಾಂಬೋರೇಟ್ ಆಯೋಜಿತವಾಗಿದೆ.

ಪೂರ್ವಭಾವಿ ಸಭೆ ನಡೆಸಿದ, ಜಿಲ್ಲಾಧಿಕಾರಿ ಬಿ. ಸುಶೀಲಾ ಅವರು, ಐದು ದಿನಗಳ ಕಾಲ ನಡೆಯುವ, ಜಾಂಬೋರೇಟ್ ನಲ್ಲಿ, 4 ಸಾವಿರ ಮಕ್ಕಳು ಭಾಗವಹಿಸಲಿದ್ದಾರೆ. ಜಿಲ್ಲಾ ಕ್ರೀಡಾಂಗಣವನ್ನು ಸರ್ವ ರೀತಿಯಿಂದ ಸಿದ್ಧಗೊಳಿಸಲು, ಸ್ಕೌಟ್ಸ್ ಮತ್ತು ಗೈಡ್ಸ್ ತಂಡಕ್ಕೆ ಜಿಲ್ಲಾಡಳಿತ ಸಹಕಾರ ನೀಡಲಿದೆ ಎಂದು, ಹೇಳಿದರು. 17 ನೇ ತಾರೀಖು, ಮೈಲಾಪುರ ಅಗಸಿಯಿಂದ, ಜಾಂಬೋರೇಟ್ ಜಾಥಾಕ್ಕೆ ಗಣ್ಯರು ಚಾಲನೆ ನೀಡಲಿದ್ದಾರೆ ಎಂದರು.

<><><>

ಗದಗ ಬೆಟಗೇರಿ ಅವಳಿ ನಗರಗಳಿಗೆ ನೀರು ಒದಗಿಸುವ ಪ್ರಮುಖ ನೀರಿನ ಮೂಲವಾದ ತುಂಗಭದ್ರಾ ನದಿಯ ನೀರೆತ್ತುವ ಸಿಂಗ ಟಾಲೂರ ಬ್ಯಾರೇಜ ಅನ್ನು ಗದಗ ಜಿಲ್ಲಾಧಿಕಾರಿ ಸಿ ಎನ್ ಶ್ರೀಧರ್ ಅವರು ವೀಕ್ಷಣೆ ಮಾಡಿದರು. ಗದಗ ಬೆಟಗೇರಿ ಅವಳಿ ನಗರಗಳ ಜನತೆಗೆ, ನಿಯಮಿತವಾಗಿ ನೀರು ಸರಬರಾಜು ಮಾಡುವಲ್ಲಿ ಇರುವ ತೊಂದರೆಗಳ ನಿವಾರಣೆಗೆ ಆದ್ಯತೆ ನೀಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

<><><>

ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲೂಕು ಹಲ್ಯಾಳ ಗ್ರಾಮದಲ್ಲಿ, ವಿವೇಕ ಯೋಜನೆ ಮತ್ತು ಸಾಮಾಜಿಕ ಹೊಣೆಗಾರಿಕೆ ನಿಧಿ ಅಡಿ ನಿರ್ಮಿಸಿದ, ಸರ್ಕಾರಿ ಶಾಲೆಯ ನಾಲ್ಕು ವರ್ಗಕೋಣೆಗಳು ಹಾಗೂ ಸಂಸದರ ಪ್ರದೇಶಾಭಿವೃದ್ಧಿ ಯೋಜನೆ ಅಡಿಯಲ್ಲಿ ನಿರ್ಮಿಸಿದ, ಅಂಗನವಾಡಿ ಕೇಂದ್ರವನ್ನು, ಕೇಂದ್ರದ ನವ ಹಾಗೂ ನವೀಕರಿಸಬಹುದಾದ ಇಂಧನಗಳ ಖಾತೆ ಸಚಿವ, ಪ್ರಲ್ಹಾದ ಜೋಶಿ ಉದ್ಘಾಟಿಸಿದರು. ಈ ಕಾರ್ಯಕ್ರಮದ ಸಾನಿಧ್ಯವನ್ನು ಕುಂದಗೋಳದ ಕಲ್ಯಾಣಪುರ ಮಠದ, ಶ್ರೀ ಬಸವಣ್ಣನವರು, ವಹಿಸಿದ್ದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..

<><><>